<u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 202(1249) |
| ಉತ್ತರಿಸುವ ದಿನಾಂಕ | ~~24-03-2020~~ 17/03/2021 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಳಗಾವಿ ಉಪನೋಂದಣಾಧಿಕಾರಿಯವರು 2018ರಲ್ಲಿ ಸರ್ವೆ ಸಂ 3928, 3929, 3929/1, 3929/2 ಮತ್ತು 3939/5ನ್ನು ಕಡಿಮೆ ದರಕ್ಕೆ ನೋಂದಣಿ ಮಾಡುವ ಮೂಲಕ ಸರ್ಕಾರಕ್ಕೆ ರೂ.12.92 ಕೋಟಿ ಮುದ್ರಾಂಕ ಶುಲ್ಕ ನಷ್ಟ ಉಂಟು ಮಾಡಿದ್ದರೂ ಸಹ 2 ವರ್ಷಗಳವರೆಗೆ ಸದರಿಯವರ ಮೇಲೆ ಕ್ರಮ ಕೈಗೊಳ್ಳದಿರಲು ಕಾರಣವೇನು; | ಜಿಲ್ಲಾ ನೋಂದಣಾಧಿಕಾರಿಗಳು ಬೆಳಗಾವಿ ಇವರ ಆದೇಶ ಸಂಖ್ಯೆ: ಎಯುಡಿ/46ಎ&80ಎ /3699 ರಿಂದ 3721/2020-21, ದಿನಾಂಕ:25-11-2020 ರಲ್ಲಿ ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 46ಎ ಹಾಗೂ ನೋಂದಣಿ ಕಾಯ್ದೆ 1908ರ ಕಲಂ 80ಎ ರಡಿಯಲ್ಲಿ ಸದರಿ ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ಉಂಟಾಗಿರುವ ಕೊರತೆ ಮುದ್ರಾಂಕ ಶುಲ್ಕ ರೂ.12,78,79,956/- ಹಾಗೂ ನೋಂದಣಿ ಶುಲ್ಕ ರೂ.12,90,707/- ಒಟ್ಟು ರೂ.12,91,70,763/- ಗಳಷ್ಟು ಮೊತ್ತವನ್ನು ಪಕ್ಷಕಾರರಿಂದ ವಸೂಲಾಯಿಸಲು ಆದೇಶಿಸಲಾಗಿರುತ್ತದೆ. ಆದ್ದರಿಂದ ಸದರಿ ಉಪನೋಂದಣಾಧಿಕಾರಿಗಳ ವಿರುದ್ಧ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. |
| ಆ | ಈ ವಿಳಂಬಕ್ಕೆ ಹೊಣೆಗಾರರು ಯಾರು; ಅವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; ರೂ.12.92 ಕೋಟಿ ಮುದ್ರಾಂಕ ಶುಲ್ಕ ನಷ್ಟದ ಮೇಲಿನ ಬಡ್ಡಿ ಪಾವತಿಸುವವರು ಯಾರು; | • ಮಹಾಲೇಖಪಾಲರು ಬೆಂಗಳೂರು ರವರು 2018-19ನೇ ಸಾಲಿನಲ್ಲಿ ಬೆಳಗಾವಿ ಉಪ ನೋಂದಣಿ ಕಛೇರಿಯನ್ನು ತಪಾಸಣೆ ನಡೆಸಿ, ದಿನಾಂಕ:09-01-2019ರ ಪತ್ರದಲ್ಲಿ ಆಕ್ಷೇಪಿಸಿರುತ್ತಾರೆ.<br>• ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಜ್ಞಾಪನ ಪತ್ರ ಸಂಖ್ಯೆ: ಎಯುಡಿ/39/2018-19/ಡಿಸಿ-01/18-19,ದಿನಾಂಕ: 16-01-2019 ರಲ್ಲಿ ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ ಕಲಂ 46ಎ ಮತ್ತು ನೋಂದಣಿ ಕಾಯ್ದೆ 1908 ರ ಕಲಂ 80ಎ ರಡಿ ಕೊರತೆ ಶುಲ್ಕಗಳ ಸಂಬಂಧಪಟ್ಟ ಪಕ್ಷಕಾರರಿಂದ ವಸೂಲಾಯಿಸಲು ಆದೇಶ ಹೊರಡಿಸಲು ನಿರ್ದೇಶಿಸಲಾಗಿತ್ತು.<br>• ಸದರಿ ಆಕ್ಷೇಪಣೆಗೆ ಸಂಬಂಧಿಸಿದಂತೆ, ಬೆಳಗಾವಿ ಜಿಲ್ಲಾ ನೋಂದಣಾಧಿಕಾರಿಗಳು ಮತ್ತು ಬೆಳಗಾವಿ ಉಪ ನೋಂದಣಾಧಿಕಾರಿಗಳು ಅನುಪಾಲನಾ ವರದಿಯನ್ನು ದಿನಾಂಕ:14-05-2019ರಂದು ಸಲ್ಲಿಸಿರುತ್ತಾರೆ. ನಂತರ ಜಿಲ್ಲಾ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ನೋಂದಣಾಧಿಕಾರಿಗಳು, ಬೆಳಗಾವಿ ರವರು ದಿನಾಂಕ: 25-11-2020 ರಲ್ಲಿ ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ ಕಲಂ 46ಎ ಹಾಗೂ ನೋಂದಣಿ ಕಾಯ್ದೆ 1908 ರ ಕಲಂ 80ಎ ರಡಿಯಲ್ಲಿ ಒಟ್ಟು 09 ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ಕೊರತೆ ಮುದ್ರಾಂಕ ಶುಲ್ಕ ರೂ.12,78,79,956/- ಹಾಗೂ ನೋಂದಣಿ ಶುಲ್ಕ ರೂ.12,90,707/- ಒಟ್ಟು ರೂ.12,91,70,763/- ಗಳಷ್ಟು ಮೊತ್ತವನ್ನು ಪಕ್ಷಕಾರರಿಂದ ವಸೂಲಾಯಿಸಲು ಆದೇಶಿಸಲಾಗಿದೆ.<br>• ಸದರಿ ಪ್ರಕರಣದ ಸಂಬಂಧ ಕ್ರಮ ಕೈಗೊಳ್ಳುವಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ.<br>ಶ್ರೀ ವಿಷ್ಣುತೀರ್ಥ, ಉಪ ನೋಂದಣಾಧಿಕಾರಿ, ಬೆಳಗಾವಿ ಇವರಿಗೆ ಕರ್ನಾಟಕ ನೋಂದಣಿ ನಿಯಮ 1965 ರ ನಿಯಮ 170ರಡಿ ಕೊರತೆ ಮೊತ್ತವನ್ನು ವಸೂಲಾಯಿಸುವ ಕುರಿತು ದಿನಾಂಕ:30-01-2021 ರಲ್ಲಿ ಕಾರಣ ಕೇಳುವ ನೋಟೀಸ್ ಜಾರಿಗೊಳಿಸಲಾಗಿರುತ್ತದೆ. ಸದರಿ ಕಾರಣ ಕೇಳುವ ನೋಟೀಸ್‌ಗೆ ಸದರಿಯವರು ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಪರಿಶೀಲಿಸಲಾಗುತ್ತಿದೆ. |
| ಇ | ಮಾರ್ಗಸೂಚಿ ದರಕ್ಕಿಂತ ಕಡಿಮೆ ದರಕ್ಕೆ ನೋಂದಣಿ ಮಾಡಿರುವ ಕುರಿತು ಹಿರಿಯ ನೋಂದಣಾಧಿಕಾರಿಯವರು ಪರಿಶೀಲಿಸದಿರಲು ಕಾರಣವೇನು; ನೋಂದಣಿ ಮಹಾಪರಿವೀಕ್ಷಕರು ಈ ಬಗ್ಗೆ ಸರ್ಕಾರಕ್ಕೆ ವರದಿ ನೀಡಿದ್ದು ಯಾವಾಗ; | ಈ ಕುರಿತು ಶ್ರೀ ವಿಷ್ಣುತೀರ್ಥ, ಉಪ ನೋಂದಣಾಧಿಕಾರಿ, ಬೆಳಗಾವಿ ಇವರು ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಮಹಾಲೇಖಪಾಲರ ಆಕ್ಷೇಪಣೆಯು ಸರಿಯಾಗಿದ್ದು, ಸರ್ಕಾರಕ್ಕೆ ರಾಜಸ್ವ ನಷ್ಟ ಉಂಟು ಮಾಡಿರುವುದರಿಂದ ಈ ಬಗ್ಗೆ ಸೂಕ್ತ ಕ್ರಮ ಜರುಗಿಸಲಾಗುತ್ತಿದೆ. |
| ಈ | ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಈ ರೀತಿಯ ಎಷ್ಟು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ; ಇದರಿಂದ ಒಟ್ಟು ಎಷ್ಟು ರಾಜಸ್ವ ನಷ್ಟವಾಗಿದೆ; ನಷ್ಟ ವಸೂಲಾತಿಗಾಗಿ ಕೈಗೊಂಡ ಕ್ರಮಗಳೇನು ಎಷ್ಟು ಉಪನೋಂದಣಾಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ? (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ 18 ಜಿಲ್ಲೆಗಳಲ್ಲಿ ಉಪ ನೋಂದಣಾಧಿಕಾರಿಗಳು ದಸ್ತಾವೇಜುಗಳನ್ನು ಅಪಮೌಲ್ಯಗೊಳಿಸಿ (ಮಾರ್ಗಸೂಚಿ ಬೆಲೆಗಿಂತ ಕಡಿಮೆ ಬೆಲೆಗೆ) ನೋಂದಣಿ ಮಾಡಿರುವುದಾಗಿ ಮಹಾಲೇಖಪಾಲರು (AG) ಆಕ್ಷೇಪಿಸಿರುತ್ತಾರೆ. ಈ ಕೆಳಕಂಡಂತೆ ವಿವರಿಸಲಾಗಿದೆ.<br>• 2017-18ನೇ ಸಾಲಿನಲ್ಲಿ 20 ಕಂಡಿಕೆಗಳಲ್ಲಿ ರೂ.8.33 ಕೋಟಿ.<br>• 2018-19ನೇ ಸಾಲಿನಲ್ಲಿ 18 ಕಂಡಿಕೆಗಳಲ್ಲಿ ರೂ.55.08 ಕೋಟಿ.<br>• 2019-20ನೇ ಸಾಲಿನಲ್ಲಿ 24 ಕಂಡಿಕೆಗಳಲ್ಲಿ ರೂ.50.03 ಕೋಟಿಗಳಷ್ಟು ನಷ್ಟವಾಗಿರುವುದಾಗಿ ಮಹಾಲೇಖಪಾಲರು ಆಕ್ಷೇಪಿಸಿರುತ್ತಾರೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಸಲ್ಲಿಸಲಾಗಿದೆ. |

. . . 3

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ಸದರಿ ಕಂಡಿಕೆಗಳ ಬಗ್ಗೆ ಸಂಬಂಧಪಟ್ಟ ಜಿಲ್ಲಾನೋಂದಣಾಧಿಕಾರಿಗಳ ಹಂತದಲ್ಲಿ ಪರಿಶೀಲನೆ ನಡೆಸಲಾಗುತ್ತಿದೆ.<br><br>ಪ್ರತಿ ವರ್ಷ ಆಡಿಟ್ ಆಕ್ಷೇಪಣೆಗಳ ಬಗ್ಗೆ ಅಡ್‌ಹಾಕ್ (ADHOC) ಸಮಿತಿ ಸಭೆಯಲ್ಲಿ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ನೋಂದಣಾಧಿಕಾರಿಗಳು, ಉಪ ನೋಂದಣಾಧಿಕಾರಿಗಳು, ಕೇಂದ್ರ ಕಛೇರಿಯ ಅಧಿಕಾರಿಗಳು, ಮಹಾಲೇಖಪಾಲರ ಕಛೇರಿ ಅಧಿಕಾರಿಗಳು ಆಡಿಟ್ ಕಂಡಿಕೆಗಳ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುತ್ತದೆ.<br><br>ಅಡ್‌ಹಾಕ್ ಸಮಿತಿ ಸಭೆಯು ದಿನಾಂಕ:11-10-2017 ರಿಂದ 19-10-2017ರ ವರೆಗೆ ನಡೆದಿದ್ದು, ಪ್ರಸ್ತುತ 2017-18ನೇ ಸಾಲಿನಿಂದ 2019-20ರವರೆಗಿನ ಕಂಡಿಕೆಗಳ ಕುರಿತು 2021ನೇ ಸಾಲಿನ ಏಪ್ರಿಲ್ ತಿಂಗಳಲ್ಲಿ ಅಡ್‌ಹಾಕ್ ಸಮಿತಿಯ ಸಭೆಯನ್ನು ನಿಗದಿಪಡಿಸಲಾಗಿದ್ದು, ಸದರಿ ಸಭೆಯಲ್ಲಿ ಆಡಿಟ್ ಕಂಡಿಕೆಗಳ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುತ್ತದೆ. |

ಸಂಖ್ಯೆ: ಕಂಇ/135/ಎಂಎನ್ಎಸ್ಎ/2021

(ಆರ್.ಅಶೋಕ)
ಕಂದಾಯ ಸಚಿವರು

## 2017-18 ನೇ ಸಾಲಿನಿಂದ 2019-20 ಸಾಲಿನ ವರೆಗೆ ಮಾರ್ಗಸೂಚಿ ಬೆಲೆಗಿಂತ ಕಡಿಮೆ ನೋಂದಣಿ ಮಾಡಿರುವ ಬಗ್ಗೆ ಆಡಿಟ್ ಆಕ್ಷೇಪಣೆ ವರದಿಯ ಮಾಹಿತಿ

| ಕ್ರಸಂ | ಜಿಲ್ಲಾ ನೋಂದಣಿ ಕಛೇರಿಯ ಹೆಸರು | 2017–18 | ಒಳಗೊಂಡ ಮೊತ್ತ | 2018-19 | ಒಳಗೊಂಡ ಮೊತ್ತ | 2019-20 | ಒಳಗೊಂಡ ಮೊತ್ತ |
|---|---|---|---|---|---|---|---|
| 1 | ಗಾಂಧಿನಗರ | 1 | 4,29,905 | 0 | 0 | 4 | 4,22,02,617 |
| 2 | ಬಸವನಗುಡಿ | 0 | 0 | 2 | 28,27,763 | 0 | 0 |
| 3 | ರಾಜಾಜಿನಗರ | 7 | 6,74,63,573 | 0 | 0 | 2 | 3,36,428 |
| 4 | ಶಿವಾಜಿನಗರ | 0 | 0 | 3 | 4,76,58,471 | 0 | 0 |
| 5 | ಬೆಂಗಳೂರು ಗ್ರಾಮಾಂತರ | 4 | 54,66,912 | 0 | 0 | 3 | 39,83,12,548 |
| 6 | ರಾಮನಗರ | 0 | 0 | 0 | 0 | 5 | 37,65,639 |
| 7 | ಬೆಳಗಾವಿ | 0 | 0 | 1 | 12,91,70,763 | 0 | 0 |
| 8 | ಬಳ್ಳಾರಿ | 0 | 0 | 0 | 0 | 1 | 2,80,71,806 |
| 9 | ಬಿಜಾಪುರ | 0 | 0 | 3 | 95,73,330 | 0 | 0 |
| 10 | ಚಿಕ್ಕಮಗಳೂರು | 0 | 0 | 1 | 72,05,537 | 0 | 0 |
| 11 | ಧಾರವಾಡ | 0 | 0 | 0 | 0 | 3 | 2,14,30,839 |
| 12 | ಹಾಸನ | 0 | 0 | 0 | 0 | 1 | 86,400 |
| 13 | ಉತ್ತರ ಕನ್ನಡ/ಕಾರವಾರ | 0 | 0 | 4 | 35,24,97,942 | 0 | 0 |
| 14 | ಕೊಪ್ಪಳ | 1 | 2,52,248 | 0 | 0 | 0 | 0 |
| 15 | ಚಿಕ್ಕಬಳ್ಳಾಪುರ | 0 | 0 | 0 | 0 | 2 | 95,42,115 |
| 16 | ಮೈಸೂರು | 2 | 26,45,666 | 0 | 0 | 3 | 15,05,915 |
| 17 | ರಾಯಚೂರು | 5 | 70,38,057 | 0 | 0 | 0 | 0 |
| 18 | ಉಡುಪಿ | 0 | 0 | 4 | 18,24,378 | 0 | 0 |
| | ಒಟ್ಟು | **20** | **8,32,96,361** | **18** | **55,07,58,184** | **24** | **50,52,54,307** |
| | | | | | ಒಟ್ಟು | **62** | **1,13,93,08,852** |

KPN 27/7/21

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು,
ಬೆಂಗಳೂರು.